# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಉನ್ನತ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ತಾಂತ್ರಿಕ ಶಿಕ್ಷಣ ಇಲಾಖೆಗೆ [ರಾಜ್ಯ ವಲಯ ಯೋಜನೆಗಳು], ಸಂಬಂಧಿಸಿದಂತೆ 2018-19ನೇ ಸಾಲಿನ ಮುಂದುವರಿಕೆ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:-

1. ಯೋಜನಾ ಇಲಾಖೆಯ ಪತ್ರ: ಪಿಡಿ 11 ಐಎಂಎಂ 2018 ದಿ: 22/03/2018
2. ಆರ್ಥಿಕ ಇಲಾಖೆಯ ಅಧಿಕೃತ ಜ್ಞಾಪನ ಪತ್ರ ಸಂ: ಎಫ್‌ಡಿ 3 ಬಿಪಿಇ 2018 ಬೆಂಗಳೂರು, ದಿನಾಂಕ : 24/03/2018
3. ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್.ಡಿ 2 ಟಿ.ಎಫ್.ಪಿ 2018 ದಿ: 03/04/2018
4. ದಿನಾಂಕ: 07/04/2018ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು [ಉನ್ನತ ಶಿಕ್ಷಣ] ಶಿಕ್ಷಣ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಶಿಕ್ಷಣ ಇಲಾಖೆಯ ಉನ್ನತ ಶಿಕ್ಷಣ ವಲಯದಡಿ ಬರುವ ಕ್ಷೇತ್ರ ಇಲಾಖೆಗಳಿಗೆ ಸಂಬಂಧಿಸಿದಂತೆ 2018-19ನೇ ಸಾಲಿನ ಮುಂದುವರಿಕೆ ಕಾರ್ಯಕ್ರಮಗಳಿಗೆ ಮಂಜೂರಾತಿ ನೀಡಲು ನಡೆದ ಮಂಜೂರಾತಿ ಸಮಿತಿ ಸಭೆ

*****

ಪ್ರಸ್ತಾವನೆ

(1) 2018-19ನೇ ಸಾಲಿನ ಮುಂದುವರೆದ ಹಾಗೂ ಹೊಸ ಯೋಜನಾ ಕಾರ್ಯಕ್ರಮಗಳ ಮಂಜೂರಾತಿ ಕುರಿತಂತೆ ಅನುಷ್ಠಾನಗೊಳಿಸುವ ಸಂಬಂಧ ಸೂಕ್ತ ನಿರ್ದೇಶನ ನೀಡಲಾಗಿರುತ್ತದೆ.

(2) ಮೇಲೆ (2)ರಲ್ಲಿ ಓದಲಾದ ಆರ್ಥಿಕ ಇಲಾಖೆಯ ಅಧಿಕೃತ ಜ್ಞಾಪನ ಪತ್ರದಲ್ಲಿ 1ನೇ ಏಪ್ರಿಲ್ 2018 ರಿಂದ 31ನೇ ಜುಲೈ 2018 ವರೆಗಿನ ಅವಧಿಯ ಧನ ವಿನಿಯೋಗದ ವಿಧೇಯಕವನ್ನು ರಾಜ್ಯ ವಿಧಾನ ಮಂಡಲವು ಅನುಮೋದಿಸಿದ್ದು, ಶಿಕ್ಷಣ ಇಲಾಖೆಯ ಅನುದಾನ/ವಿನಿಯೋಗಗಳನ್ನು ಈ ಅಧಿನಿಯಮವು ಅಧಿಕೃತಗೊಳಸುತ್ತದೆ ಎಂದು ತಿಳಿಸಿದೆ.

(3) ಮೇಲೆ (3)ರಲ್ಲಿ ಓದಲಾದ ಆರ್ಥಿಕ ಇಲಾಖೆಯ ಆದೇಶದಲ್ಲಿ 2018-19ನೇ ಸಾಲಿನ ಮುಂದುವರಿಕಾ ಕಾರ್ಯಕ್ರಮಗಳಿಗೆ ಮೊದಲನೇ ತ್ರೈಮಾಸಿಕ ಕಂತನ್ನು ಬಿಡುಗಡೆ ಮಾಡಲು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಅಧಿಕಾರ ಪ್ರತ್ಯಾಯೋಜನೆ ಮಾಡಲಾಗಿದೆ.

(4) ಮೇಲೆ (4)ರಲ್ಲಿ ಓದಲಾದ ದಿನಾಂಕ: 07-04-2018ರಂದು ನಡೆದ ಸಭೆಯಲ್ಲಿ ಉನ್ನತ ಶಿಕ್ಷಣ ಇಲಾಖೆಯಡಿ ಬರುವ ಕ್ಷೇತ್ರ ಇಲಾಖೆಗಳ 2018-19ನೇ ಸಾಲಿನ ಮುಂದುವರಿಕೆ ಕಾರ್ಯಕ್ರಮಗಳ ಮಂಜೂರಾತಿಗೆ ಸಂಬಂಧಿಸಿದಂತೆ ಇಲಾಖೆಯು ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಿ, 2018-19ನೇ ಸಾಲಿನ ಮುಂದುವರಿಕೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಲುವಾಗಿ ಅನುಮೋದನೆ ನೀಡಲಾಗಿದೆ.

(5) ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ ಆಧಾರ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 23 ಹೆಚ್‌ಪಿಟಿ 2018, ಬೆಂಗಳೂರು,
ದಿನಾಂಕ: 09/04/2018

(6) 2018-19ನೇ ಸಾಲಿಗೆ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಡಿ ಬರುವ ತಾಂತ್ರಿಕ ಶಿಕ್ಷಣ ಇಲಾಖೆಗೆ(ರಾಜ್ಯ ವಲಯ ಯೋಜನೆಗಳು) ಸಂಬಂಧಿಸಿದಂತೆ, ಆಯವ್ಯಯದಲ್ಲಿನ ಕಾರ್ಯಕ್ರಮಗಳಡಿಯಲ್ಲಿಯ ಮುಂದುವರಿಕೆ ಕಾರ್ಯಕ್ರಮಗಳಿಗೆ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ-1 ರಲ್ಲಿ ಸೂಚಿಸಿರುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರಿಗೆ ಈ ಕೆಳಗಿನ ಷರತ್ತುಗಳನ್ನು ಪಾಲಿಸಬೇಕೆಂಬ ನಿಬಂಧನೆಯನ್ನು ವಿಧಿಸಿ ಸರ್ಕಾರ ಅನುಮೋದನೆ ನೀಡಿ ಆದೇಶಿಸಿದೆ.

- 2017-18ನೇ ಸಾಲಿನ 2018-19ನೇ ಸಾಲಿಗೆ ಅನುಷ್ಠಾನಗೊಳಿಸುವುದು.

- ಈ ಆದೇಶದಲ್ಲಿ ಮುಂದುವರೆಸಿರುವ ಕಾರ್ಯಕ್ರಮಗಳಲ್ಲಿ ಯಾವುದೇ ಹೊಸ ಘಟಕಗಳ ಪ್ರಸ್ತಾವನೆ ಇದ್ದಲ್ಲಿ, ಸರ್ಕಾರದ ಪ್ರತ್ಯೇಕ ಮಂಜೂರಾತಿಯನ್ನು ಪಡೆದು ನಂತರವೇ ಅನುಷ್ಠಾನಗೊಳಿಸತಕ್ಕದ್ದು.

- ಮುಂದುವರೆದ ಯೋಜನೆಗಳಡಿಯಲ್ಲಿ ಖರೀದಿಗಳಿಗೆ ಸಂಬಂಧಿಸಿದಂತೆ ಎಲ್ಲಾ ಖರೀದಿ ನಿಯಮಗಳನ್ನು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾದರರ್ಶಕತೆ ಅಧ್ಯಾದೇಶ 2000ರ ಮತ್ತು ಅದರಡಿಯಲ್ಲಿನ ನಿಯಮಗಳನ್ನು ಚಾಚೂ ತಪ್ಪದೇ ಕಡ್ಡಾಯವಾಗಿ ಹಾಗೂ ಕಟ್ಟು ನಿಟ್ಟಾಗಿ ಪಾಲಿಸತಕ್ಕದ್ದು.

- ಗಣಕಯಂತ್ರಗಳ ಖರೀದಿಗೆ ಸಂಬಂಧಿಸಿದಂತೆ ಇ-ಆಡಳಿತ ಇಲಾಖೆಯು ಸೂಚಿಸಿರುವಂತೆ ಕ್ರಿಯಾ ಯೋಜನೆಗೆ ರಾಜ್ಯ ಮಟ್ಟದ ಉನ್ನತಾಧಿಕಾರಿ ಸಮಿತಿಯ ಮತ್ತು ಟ್ಯಾಪ್‌ನ ಅನುಮೋದನೆಯನ್ನು ಪಡೆಯತಕ್ಕದ್ದು.

- ವೆಚ್ಚ ಮಾಡುವ ಮುನ್ನ ಕಾರ್ಯಕ್ರಮ ಅನುಷ್ಠಾನಗೊಳಿಸುವ ಅಧಿಕಾರಿಗಳು ಈ ಹಿಂದಿನ ಸಾಲಿನ ಆದೇಶದಲ್ಲಿ ತಿಳಿಸಿದಂತೆ ಎಲ್ಲಾ ನಿಯಮಗಳನ್ನು ಪಾಲಿಸಲು ಸೂಚಿಸಿದೆ.

- ಮಂಜೂರಾದ ತಾತ್ಕಾಲಿಕ ಹುದ್ದೆಗಳ ಬಗ್ಗೆ ಪರಾಮರ್ಶಿಸಿ ಅವುಗಳನ್ನು ಮುಂದುವರೆಸುವ ಅಗತ್ಯತೆ ಅನುಸರಿಸಿ ಮುಂದುವರಿಕೆ ಆದೇಶ ಹೊರಡಿಸಬೇಕು ಹಾಗೂ ನಂತರವೇ ವೇತನ ಬಿಡುಗಡೆ ಮಾಡುವುದು.

- ಹುದ್ದೆಗಳನ್ನು ಸೃಜಿಸುವ ಹಾಗೂ ಹೊಸ ವಾಹನಗಳನ್ನು ಖರೀದಿಸುವ ಬಗ್ಗೆ ಆರ್ಥಿಕ ಇಲಾಖೆಯ ಸಹಮತಿಯನ್ನು ಪಡೆಯತಕ್ಕದ್ದು.

- ಉಪಕರಣ/ಗಣಕ ಯಂತ್ರ ಇತ್ಯಾದಿ ಖರೀದಿಗೆ ಸಂಬಂಧಿಸಿದಂತೆ, ಇ-ಆಡಳಿತ ಇಲಾಖೆಯ ಆದೇಶಗಳು, ತಾಂತ್ರಿಕ ಸಮಿತಿ ಒಪ್ಪಿಗೆ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ನಿಯಮಗಳನ್ನು ಪಾಲಿಸಬೇಕು.

- ಕೇಂದ್ರ ಯೋಜನೆಗಳು/ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಕೇಂದ್ರದ ಅನುದಾನ ಸ್ವೀಕೃತವಾಗಿರುವುದನ್ನು ದೃಢಪಡಿಸಿಕೊಂಡ ನಂತರವೇ ಕೇಂದ್ರ ಸಹಾಯದ ಅನುದಾನ/ರಾಜ್ಯದ ಪಾಲಿನ ಅನುದಾನವನ್ನು ಆಯವ್ಯಯದಲ್ಲಿ ಒದಗಿಸಿದ ಅನುದಾನ ನೋಡಿಕೊಂಡು ಬಿಡುಗಡೆ ಮಾಡಬೇಕು. ಕೇಂದ್ರ ಸಹಾಯ ಸ್ವೀಕೃತವಾಗಿದ್ದರೂ ಪ್ರಸ್ತಾಪಿತ ಲೆಕ್ಕ ಶೀರ್ಷಿಕೆಯಡಿಯಲ್ಲಿ ಅನುದಾನ

ಲಭ್ಯವಿರದಿದ್ದರೆ ಆರ್ಥಿಕ ಇಲಾಖೆಯನ್ನು ಸಂಪರ್ಕಿಸಿ ಅನುದಾನ ಒದಗಿಸಿಕೊಳ್ಳಲು ಸಹಮತಿ ಪಡೆದ ನಂತರವೇ ಬಿಡುಗಡೆ ಮಾಡುವುದು.

- ಪ್ರತಿಯೊಂದು ಕಾರ್ಯಕ್ರಮಕ್ಕೆ ವೈಜ್ಞಾನಿಕವಾಗಿ ಎಂಪಿಕ್ ಅನ್ನು ಸಿದ್ಧಪಡಿಸಿ ದಿನಾಂಕ: 24-04-2018 ರೊಳಗೆ ಸರ್ಕಾರಕ್ಕೆ ಸಲ್ಲಿಸುವುದು.

- ಎಸ್.ಸಿ.ಪಿ./ಟಿ.ಎಸ್.ಪಿ/ಎಸ್.ಡಿ.ಪಿ ಕಾರ್ಯಕ್ರಮಗಳ ಬಗ್ಗೆ ಜಾರಿಯಲ್ಲಿರುವ ಸೂಚನೆಗಳನ್ನು ಪಾಲಿಸಬೇಕು. ಕ್ರಿಯಾ ಯೋಜನೆ ಅನುಮೋದನೆ ನಂತರವೇ ಅನುದಾನ ಬಿಡುಗಡೆ / ಬಳಕೆ ಮಾಡುವುದು.

ಮುಂದುವರೆದು ಯೋಜನೆಗಳಲ್ಲಿ ಹೊಸ ಘಟಕಗಳ ಬಗ್ಗೆ ಪ್ರಸ್ತಾಪಿಸಿದ್ದರೆ, ಅಪರ ಮುಖ್ಯ ಕಾರ್ಯದರ್ಶಿಯವರ ಹಾಗೂ ಅಭಿವೃದ್ಧಿ ಆಯುಕ್ತರ ಸಮಿತಿ ಮುಂದೆ ಸರ್ಕಾರದ ಮುಖಾಂತರ ಮಂಡಿಸಿ ಅನುಮೋದನೆ ಪಡೆಯತಕ್ಕದ್ದು.

6. ಈ ಆದೇಶವನ್ನು ಯೋಜನಾ ಇಲಾಖೆ ಆದೇಶ ಸಂಖ್ಯೆ: ಪಿಡಿ 11 ಐಎಂಎಂ 2018 ದಿ: 24.03.2018ರನ್ವಯಹಾಗೂ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2018 ದಿ: 03.04.2018ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ

9/4

[ಅಪರ್ಣಾ ಪಾವಟೆ]
ಆಂತರಿಕ ಆರ್ಥಿಕ ಸಲಹೆಗಾರರು ಮತ್ತು
ಸರ್ಕಾರದ ಉಪ ಕಾರ್ಯದರ್ಶಿ (ಯೋಜನೆ)
ಉನ್ನತ ಶಿಕ್ಷಣ ಇಲಾಖೆ

9/4

ಪ್ರತಿಯನ್ನು:

1. ಮಹಾಲೇಖಪಾಲರು, ಕರ್ನಾಟಕ [ಆಡಿಟ್ 1 ಮತ್ತು 2]
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಲೆಕ್ಕಾಧಿಕಾರಿಗಳು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ಖಜಾನಾ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಬೆಂಗಳೂರು.
5. ಉಪ-ನಿರ್ದೇಶಕರು, ಖಜನಾ ಗಣಕ ಕೇಂದ್ರ, ನಂ.49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು ರವರ ಆಪ್ತ ಕಾರ್ಯದರ್ಶಿಗಳು ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನಾ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ ರವರ ಆಪ್ತ ಕಾರ್ಯದರ್ಶಿಯವರು, ಬಹುಮಹಡಿ ಕಟ್ಟಡ, ಬೆಂಗಳೂರು.
8. ಯೋಜನೆ ಆಯುಕ್ತರ ಆಪ್ತ ಕಾರ್ಯದರ್ಶಿಗಳು,
9. ನಿರ್ದೇಶಕರು, ಜನಶಕ್ತಿ ಮತ್ತು ಉದ್ಯೋಗ ವಿಭಾಗ, ಯೋಜನಾ ಇಲಾಖೆ,ಬೆಂಗಳೂರು.
10. ನಿರ್ದೇಶಕರು, ಪಿ.ಎಂ.ಐ. ವಿಭಾಗ, ಯೋಜನಾ ಇಲಾಖೆ, ಬೆಂಗಳೂರು.
11. ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
12. ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ, ಬೆಂಗಳೂರು.
13. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.

14. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಉನ್ನತ ಶಿಕ್ಷಣ) ಶಿಕ್ಷಣ ಇಲಾಖೆ, ಬೆಂಗಳೂರು ರವರ ಆಪ್ತ ಕಾರ್ಯದರ್ಶಿಗಳು.
15. ಸಮನ್ವಯಾಧಿಕಾರಿ, ಮಾಹಿತಿ ಕೇಂದ್ರ ಶಿಕ್ಷಣ ಇಲಾಖೆ, ಬೆಂಗಳೂರು.
16. ಸಾಪ್ತಾಹಿಕ ರಾಜ್ಯ ಪತ್ರ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ: ಇಡಿ 23 ಹೆಚ್‌ಪಿಟಿ ಬೆಂಗಳೂರು
ದಿನಾಂಕ:09/04/2018ಕ್ಕೆ ಅನುಬಂಧ-1

ರೂ. ಲಕ್ಷಗಳಲ್ಲಿ

| ನಿರ್ದೇಶನ ಮತ್ತು ಆಡಳಿತ:2203-00-001-0-01<br>ನಿರ್ದೇಶಕರು,ತಾಂತ್ರಿಕ ಶಿಕ್ಷಣ ಇಲಾಖೆ | | | |
|---|---|---|---|
| ಕ್ರಮ ಸಂ | ಉಪ ಲೆಕ್ಕ ಶೀರ್ಷಿಕೆ | ವಿವರ | ಒದಗಿಸಲಾದ ಅನುದಾನ |
| 1 | ವೇತನ | ನಿರ್ದೇಶನಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವೇತನ ವೆಚ್ಚಗಳನ್ನು ಭರಿಸಲು | 1277.00 |
| 2 | 021 | ವೈದ್ಯಕೀಯ ವೆಚ್ಚದ ಮರುಪಾವತಿ | 15.00 |
| 3 | 051 | • ನಿರ್ದೇಶನಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ಅಕುಶಲದಾಳು ಹಾಗೂ ಸೆಕ್ಯೂರಿಟಿ ಗಾರ್ಡ್‌ಗಳ ಭತ್ಯೆ ಭರಿಸಲು<br>• ನಿರ್ದೇಶನಾಲಯದ ಕಛೇರಿ ವೆಚ್ಚಗಳಿಗೆ<br>• ರಾಜ್ಯಮಟ್ಟದ ಕ್ರೀಡಾಕೂಟದ ಏರ್ಪಾಡು ಮತ್ತು ತಾಂತ್ರಿಕ ವಸ್ತು ಪ್ರದರ್ಶನಗಳನ್ನು ಏರ್ಪಡಿಸಲು<br>• ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕೋರ್ಸ್‌ಗಳಿಗೆ ಅಕ್ರಿಡಿಟೇಷನ್ ಪಡೆಯಲು ಫೀ ಸಂದಾಯಕ್ಕಾಗಿ<br>• ಇ-ಆಡಳಿತದ ಖರ್ಚು ವೆಚ್ಚಗಳನ್ನು ಭರಿಸಲು ಹಾಗೂ ಹೊಸ ಇಂಜಿನಿಯರಿಂಗ್ ಕಾಲೇಜು ಪ್ರಾರಂಭಿಸಲು ನಿಯೋಜಿಸಲಾಗಿರುವ ತಜ್ಞರ ಸಮಿತಿಗೆ ಅನುದಾನ ಬಿಡುಗಡೆ ಮಾಡಲು<br>• ಕಂಪ್ಯೂಟರ್, ಪ್ರಿಂಟರ್, ಜೆರಾಕ್ಸ್‌ಯಂತ್ರ ಮುಂತಾದ ಉಪಕರಣಗಳ ಖರೀದಿ ; ಈಗಾಗಲೇ ಖರೀದಿಸಲಾದ ಉಪಕರಣಗಳ ನಿರ್ವಹಣೆ, ಝುರಾಕ್ಸ್ ಯಂತ್ರಗಳಿಗೆ ಅಗತ್ಯವಿರುವ ಕಾಗದ, ಕೆಮಿಕಲ್ಸ್‌ಗಳ ಖರೀದಿಗಾಗಿ ಮತ್ತು ಹಿಂದಿನ ಸಾಲುಗಳಲ್ಲಿ ಸರಬರಾಜಾದ ಉಪಕರಣಗಳ ಮತ್ತಿತರೆ ಖರೀದಿಗಳಿಗೆ ಸಂಬಂಧಿಸಿದಂತೆ ಹಿಂದಿನ ವರ್ಷದ ಬಾಕಿ ಪಾವತಿ ಮಾಡಲು | 13.00 |
| 4 | 041 | ನಿರ್ದೇಶನಾಲಯದ ಸಿಬ್ಬಂದಿಗಳ ಪ್ರಯಾಣ ವೆಚ್ಚ | 8.00 |
| 5 | 052 | ದೂರವಾಣಿ ವೆಚ್ಚ | 10.00 |
| 6 | 071 | ವಿದ್ಯುತ್‌ಬಿಲ್ ಹಾಗೂ ಲಿಫ್ಟ್ ನಿರ್ವಹಣೆ | 10.00 |
| 7 | 195 | ನಿರ್ದೇಶನಾಲಯದ ವಾಹನಗಳಿಗೆ ಇಂಧನ, ವಿಮೆ, ರಿಪೇರಿ, ನಿರ್ವಹಣೆ, ವಾಹನ ಬಾಡಿಗೆ | 10.00 |
| | | ಒಟ್ಟು ಮೊತ್ತ | 1343.00 |

| | | | |
|---|---|---|---|
| 2 | 2. ತಾಂತ್ರಿಕ ಶಿಕ್ಷಣದ ಗುಣ ಮಟ್ಟದ ಸುಧಾರಣೆ:2203-00-001-0-02 | | |
| 1 | 041<br>052<br>059<br>195<br>221 | • ಕೇಂದ್ರ ಸರ್ಕಾರದಿಂದ ಆಯ್ಕೆಯಾಗಿರುವ ಕಾಲೇಜುಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನಕ್ಕೆ ರಾಜ್ಯದ ಪಾಲು ಸೇರಿಸಿ ವೆಚ್ಚ ಭರಿಸಲು ; ಕೇಂದ್ರ ಕಛೇರಿಯಲ್ಲಿನ ಅಂಗೀಕೃತ ವೆಚ್ಚಗಳನ್ನು ನಿರ್ವಹಿಸುವ ಕಾರ್ಯಕ್ರಮ.<br>• ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆಯಾಗದೇ ಇದ್ದಲ್ಲಿ ಹಾಲಿ ಇರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಹಾಗೂ ಪಾಲಿಟೆಕ್ನಿಕ್‌ಗಳಲ್ಲಿ ನತನ ಯಂತ್ರೋಪಕರಣ ಖರೀದಿಯೊಂದಿಗೆ ಗುಣ ಮಟ್ಟದ ಸುಧಾರಣೆ ಮಾಡುವ ಬಗ್ಗೆ | 1381.00 |
| 2 | 422 | ಪರಿಶಿಷ್ಟ ಜಾತಿ ಉಪಯೋಜನೆ | 400.00 |
| 3 | 423 | ಗಿರಿಜನ ಉಪಯೋಜನೆ | 200.00 |
| | | ಒಟ್ಟು ಮೊತ್ತ | 1981.00 |
| | 3. ಸ್ಯಾಟಲೈಟ್ ಶಿಕ್ಷಣ:2203-00-003-0-03 | | |
| 1. | 059 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಮತ್ತು ಸರ್ಕಾರಿ ಪಾಲಿಟೆಕ್ನಿಕ್ ವಿದ್ಯಾರ್ಥಿಗಳಿಗೆ ಉಪಗ್ರಹದ ಮೂಲಕ ತಜ್ಞರಿಂದ ಪಾಠಪ್ರವಚನ ಬಿತ್ತರಿಸಲು ಅಗತ್ಯವಿರುವ ಯಂತ್ರೋಪಕರಣಗಳನ್ನು ಖರೀದಿಸುವುದು, ಸ್ಟುಡಿಯೋ ನಿರ್ವಹಣೆ ಮತ್ತು ಕಾರ್ಯಕ್ರಮಕ್ಕೆ ಅಗತ್ಯವಿರುವ ಕಛೇರಿ ವೆಚ್ಚಗಳನ್ನು ಭರಿಸಲು<br><br>ಮೇಲ್ಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ತಾಂತ್ರಿಕ ಶಿಕ್ಷಣ ನಿರ್ದೇಶಕರಿಗೆ ಅನುಮತಿ ನೀಡಿದೆ. | 5.00 |
| | | ಒಟ್ಟು ಮೊತ್ತ | 5.00 |
| | 4.<br>4. ಕಿರಿಯ ತಾಂತ್ರಿಕ ಶಾಲೆಗಳು:2203-00-103-0-01 | | |
| 1. | ವೇತನ | 6 ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವೇತನ | 334.00 |
| | 021 | ವೈದ್ಯಕೀಯ ವೆಚ್ಚದ ಮರುಪಾವತಿ | 15.00 |
| | 051 | ಅರೆಕಾಲಿಕ ಉಪನ್ಯಾಸಕರು, ಅರೆಕಾಲಿಕ ಅಕುಶಲದಾಳು, ಸೆಕ್ಯೂರಿ ಗಾರ್ಡ್‌ಗಳ ಭತ್ಯೆ ಹಾಗೂ ಕಛೇರಿ ವೆಚ್ಚಗಳಿಗಾಗಿ | 8.00 |
| | 041 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಪ್ರಯಾಣ ವೆಚ್ಚ ಭರಿಸಲು | 1.00 |
| | 052 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ | 1.00 |

| | | | |
|---|---|---|---|
| | | ದೂರವಾಣಿ ವೆಚ್ಚ ಭರಿಸಲು | |
| | 071 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ವಿದ್ಯುತ್ ವೆಚ್ಚ ಭರಿಸಲು | 4.00 |
| | 180 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಿಗೆ ಯಂತ್ರೋಪಕರಣ & ಸಾಧನ ಸಾಮಗ್ರಿಗಳನ್ನು ಖರೀದಿಸಲು | 1.00 |
| | 221 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಿಗೆ ಸಾಮಗ್ರಿ & ಸರಬರಾಜುಗಳನ್ನು ಖರೀದಿಸಲು | 1.00 |
| | | ಒಟ್ಟು ಮೊತ್ತ | 365.00 |
| 5.ಕಟ್ಟಡಗಳು:2203-00-103-0-02 | | | |
| 1. | 147 | 6 ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಕಟ್ಟಡ ದುರಸ್ಥಿಗಾಗಿ | 1.00 |
| | | ಒಟ್ಟು ಮೊತ್ತ | 1.00 |
| 6.ತಾಂತ್ರಿಕ ಶಾಲೆ, ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಗೆ ಕಟ್ಟಡಗಳು: 2203-00-103-0-04 | | | |
| 1. | | ಸ್ಟೈರಿಕ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವೇತನ | 23.00 |
| | 021 | ವೈದ್ಯಕೀಯ ವೆಚ್ಚದ ಮರುಪಾವತಿ | 3.00 |
| | 051 | ನಿರ್ದೇಶನಾಲಯದ ಕಛೇರಿ ವೆಚ್ಚ | 1.00 |
| | 059<br>200 | ಸರ್ಕಾರಿ ಪಾಲಿಟೆಕ್ನಿಕ್, ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳು ಮತ್ತು ನಿರ್ದೇಶನಾಲಯಗಳಲ್ಲಿ ಕಟ್ಟಡಗಳ ದುರಸ್ತಿ ಮತ್ತು ನವೀಕರಣ ; ಶೌಚಾಲಯಗಳ ನಿರ್ವಹಣೆ ಮತ್ತು ದುರಸ್ತಿ; ಕುಡಿಯುವ ನೀರಿನ ವ್ಯವಸ್ಥೆ; ಕಾಂಪೌಂಡ್ ಗೋಡೆ ನಿರ್ಮಾಣ ಮತ್ತು ದುರಸ್ತಿ; ವಿದ್ಯಾರ್ಥಿನಿಯ ಕಟ್ಟಡಗಳ ದುರಸ್ತಿ; ಸಿಬ್ಬಂದಿ ವಸತಿ ಗೃಹ ದುರಸ್ತಿ; ವಿದ್ಯುತ್ ನಿರ್ವಹಣೆ; ಸಂಪರ್ಕ ಮತ್ತು ದುರಸ್ತಿ; ಕಟ್ಟಡಗಳ ದುರಸ್ತಿ ನಿರ್ವಹಣೆ ಹಾಗೂ ಸ್ವಚ್ಛತಾ ಕಾರ್ಯ ಮತ್ತು ಹಿಂದಿನ ಸಾಲಿನಲ್ಲಿ ಅನುಮೋದನೆಗೊಂಡ ಕಾಮಗಾರಿಗಳ ಬಾಕಿ ಬಿಲ್ಲುಗಳ ಪಾವತಿಗಾಗಿ ಹಾಗೂ ಸರ್ಕಾರಿ ಪಾಲಿಟೆಕ್ನಿಕ್ ಆಸ್ತಿಗಳ ತೆರಿಗೆ ಮತ್ತು ಸೇವಾ ಶುಲ್ಕ ಪಾವತಿ ಮಾಡಲು,<br>ಹಾಗೂ Indo-German Centre of excellence technical training centre ಸ್ಥಾಪನೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು (ರೂ. 450+73=523 ಲಕ್ಷಗಳು) | 523.00 |
| | | ಒಟ್ಟು ಮೊತ್ತ | 550.00 |
| 7.ಸರ್ಕಾರೇತರ ತಾಂತ್ರಿಕ ಕಾಲೇಜು ಮತ್ತು ಸಂಸ್ಥೆಗಳಗೆ ಸಹಾಯ:2203-00-104-0-01 | | | |
| 1. | 101 | 2018-19 ನೇ ಸಾಲಿನಲ್ಲಿ ಯೋಜನೆಯಡಿ | 37743.00 |

| | | | |
|---|---|---|---|
| | | ರಷ್ಟು ಸರ್ಕಾರದ ವೇತನಾನುದಾನವನ್ನು ಸಿಬ್ಬಂದಿಗಳಿಗೆ ಹೆಚ್.ಆರ್.ಎಂ.ಎಸ್ ಮೂಲಕ ಹಾಗೂ ಆಡಳಿತ ಮಂಡಳಿಯ ಸೀಟುಗಳನ್ನು ಇಚ್ಛಿಸುವ ಅನುದಾನಿತ ಪಾಲಿಟೆಕ್ನಿಕ್‌ಗಳಿಗೆ ಶೇ. 85 ರಷ್ಟು ವೇತನಾನುದಾನ ಹಾಗೂ ಬಾಕಿ ವೇತನ ಹಾಗೂ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ ಅನುಮೋದಿತ ಸಿಬ್ಬಂದಿಗಳ ವೇತನ ಹಾಗೂ ಬಾಕಿ ವೇತನ ಭರಿಸಲು | |
| | | ಒಟ್ಟು ಮೊತ್ತ | 37743.00 |
| 8.ಸರ್ಕಾರಿ ಪಾಲಿಟೆಕ್ನಿಕ್‌ಗಳು:2203-00-105-0-01 | | | |
| 1. | ವೇತನ | ಸರ್ಕಾರಿ ಪಾಲಿಟೆಕ್ನಿಕ್‌ಗಳ ಸಿಬ್ಬಂದಿಗಳಿಗೆ ವೇತನ ಪಾವತಿ | 28847.00 |
| | 015 | ಸರ್ಕಾರಿ ಪಾಲಿಟೆಕ್ನಿಕ್‌ಗಳ ಸಿಬ್ಬಂದಿಗಳ ಪೂರಕ ವೆಚ್ಚಕ್ಕಾಗಿ | 50.00 |
| | 021 | ವೈದ್ಯಕೀಯ ವೆಚ್ಚ ಮರುಪಾವತಿ | 237.00 |
| | 034 | ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅರೆಕಾಲಿಕ ಉಪನ್ಯಾಸಕರ ಭತ್ಯೆ, ಅಕುಶಲದಾಳುಗಳ ಭತ್ಯೆ, ಸೆಕ್ಯೂರಿಟಿ ಗಾರ್ಡ್‌ಗಳ ವೆಚ್ಚ | 1134.00 |
| | 041 | ಸರ್ಕಾರಿ ಪಾಲಿಟೆಕ್ನಿಕ್‌ಗಳ ಸಿಬ್ಬಂದಿಗಳ ಪ್ರಯಾಣ ವೆಚ್ಚ | 9.00 |
| | 051 | ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿನ ಕಛೇರಿ ವೆಚ್ಚಗಳಾದ ಅರೆಕಾಲಿಕ ಉಪನ್ಯಾಸಕರ ಭತ್ಯೆ, ಅಕುಶಲದಾಳುಗಳ ಭತ್ಯೆ, ಸೆಕ್ಯೂರಿಟಿ ಗಾರ್ಡ್‌ಗಳ ವೆಚ್ಚ, ದೂರವಾಣಿ, ವಿದ್ಯುತ್ ಹಾಗೂ ನೀರಿನ ವೆಚ್ಚ, ಹಾಸ್ಟಲ್ ಹಾಗೂ ಇತರೆ ಕಟ್ಟಡಗಳ ಬಾಡಿಗೆ, ಯಂತ್ರೋಪಕರಣ-ಪೀಠೋಪಕರಣ - ಪುಸ್ತಕ ಮತ್ತಿತರೇ ಉಪಕರಣಗಳ ಖರೀದಿ, ಸಿಸಿಟಿವಿ ಖರೀದಿ, ಬಯೋಮೆಟ್ರಿಕ್ ಹಾಜರಾತಿ ಪದ್ಧತಿ ಅನುಷ್ಠಾನ, ವಿದ್ಯಾರ್ಥಿಗಳಿಗೆ ಡೆಸ್ಕ್ ಖರೀದಿಸಲು, ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕೋರ್ಸ್‌ಗಳಿಗೆ ಅಕ್ರಿಡಿಟೇಷನ್ ಪಡೆಯಲು ಫೀ ಸಂದಾಯ ಮಾಡಲು ಮತ್ತು ಈಗಾಗಲೇ ಖರೀದಿಸಲಾದ ಉಪಕರಣಗಳ ನಿರ್ವಹಣೆ ಹಾಗೂ ಹಿಂದಿನ ವರ್ಷದ ಬಾಕಿ ಪಾವತಿ ಮಾಡಲು | 960.00 |
| | 052 | ದೂರವಾಣಿ ವೆಚ್ಚ ಪಾವತಿಸಲು | 4.00 |
| | 059 | ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿನ ಕಛೇರಿ ವೆಚ್ಚ ಭರಿಸಲು | 2.00 |
| | 071 | ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿನ ವಿದ್ಯುತ್ ವೆಚ್ಚ, ನೀರಿನ ವೆಚ್ಚ ಹಾಗೂ ಕಟ್ಟಡ ಬಾಡಿಗೆ ಪಾವತಿಸಲು | 84.00 |

| | | | |
|---|---|---|---|
| | 180 | ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿನ ಯಂತ್ರೋಪಕರಣ ಖರೀದಿ, | 170.00 |
| | 195 | ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿನ ಸಾರಿಗೆ ವೆಚ್ಚ ಭರಿಸಲು | 2.00 |
| | 221 | ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿನ ಯಂತ್ರೋಪಕರಣ, ಉಪಕರಣ & ಸಾಮಗ್ರಿ ಖರೀದಿ, | 27.00 |
| | | ಒಟ್ಟು ಮೊತ್ತ | 31526.00 |
| 9.ವಿದ್ಯಾರ್ಥಿ ವೇತನ ಹಾಗೂ ಪ್ರೋತ್ಸಾಹ:2203-00-107-1-00 | | | |
| 1. | 117 | ಈ ಕಾರ್ಯಕ್ರಮಕ್ಕೆ 2018-19 ನೇ ಸಾಲಿಗೆ ರೂ. 3497.00 ಲಕ್ಷಗಳು (ರೂಪಾಯಿ ಮೂವತ್ತಾ ನಾಲ್ಕು ಕೋಟಿ ತೊಂಬತ್ತೇಳು ಲಕ್ಷಗಳು) ನಿಗಧಿಯಾಗಿದ್ದು,<br>• ಕೆ.ಇ.ಎ ಮುಖಾಂತರ ಇಂಜಿನಿಯರಿಂಗ್ ಕಾಲೇಜುಗಳಿಗೆ ಪ್ರವೇಶಾತಿ ಪಡೆಯುವ ಹಾಗೂ ಇಲಾಖೆಯ ನೋಡಲ್ ಸೆಂಟರ್ ಮೂಲಕ ಪಾಲಿಟೆಕ್ನಿಕ್‌ಗಳಿಗೆ ಪ್ರವೇಶಾತಿ ಪಡೆಯುವ (1) ರಕ್ಷಣಾ ಸಿಬ್ಬಂದಿ ಮಕ್ಕಳಿಗೆ / ಆಶ್ರಿತರಿಗೆ ವಿದ್ಯಾರ್ಥಿ ವೇತನ, (2) ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು (3) ಲೆಪ್ರಸಿ ಮತ್ತು ಹೆಚ್.ಐ.ವಿ ಕಾಯಿಲೆಯಿಂದ ಬಳಲುತ್ತಿರುವ ಪೋಷಕರ ಮಕ್ಕಳಿಗೆ ಮತ್ತು ಈ ರೋಗ ಪೀಡಿತ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ (4) ಕಿರಿಯ ತಾಂತ್ರಿಕ ಶಾಲೆಗಳ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಪಾವತಿ<br>• ಕುಟುಂಬ ವಾರ್ಷಿಕ ಆದಾಯ ರೂ. 2.50 ಲಕ್ಷದಿಂದ 10 ಲಕ್ಷ ಒಳಗಿರುವ ಎಸ್‌ಸಿ / ಎಸ್‌ಟಿ ವಿದ್ಯಾರ್ಥಿಗಳಿ ಶುಲ್ಕ ವಿನಾಯಿತಿ ನೀಡುವ ಸಲುವಾಗಿ<br>ಸಿಟಿಇ ಮೂಲಕ ಬಿ.ಇ / ಬಿ.ಟೆಕ್ ಬಿ.ಆರ್ಕ್ ಕೋರ್ಸ್‌ಗಳಿಗೆ ಅನುದಾನಿತ / ಅನುದಾನರಹಿತ / ಖಾಸಗಿ ಮತ್ತು ಡೀಮ್ಡ್ ವಿಶ್ವವಿದ್ಯಾಲಯದ ಕಾಲೇಜು / ಸಂಸ್ಥೆಗಳಿಗಳಲ್ಲಿ ಪ್ರವೇಶ ಪಡದಿರುವ ವಿದ್ಯಾರ್ಥಿಗಳಿಗೆ ಶೇ. 100 ರಷ್ಟು ಶುಲ್ಕ ವಿನಾಯಿತಿ & ಪಿ.ಜಿ / ಸಿ.ಇ.ಟಿ ಯಿಂದ ಆಯ್ಕೆಯಾಗುವ ಎಂ.ಇ / ಎಂ.ಟೆಕ್ ವಿದ್ಯಾರ್ಥಿಗಳಿಗೆ ಹಾಗೂ ಕಾಮೆಡ್-ಕೆ / ಡೀಮ್ಡ್ ವಿಶ್ವವಿದ್ಯಾನಿಲಯಗಳ ಕಾಲೇಜುಗಳಲ್ಲಿ ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ ಶೇ. 50 ರಷ್ಟು ಶುಲ್ಕ ವಿನಾಯಿತಿ | 3497.00 |
| | | ಮೇಲಿನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ತಾಂತ್ರಿಕ ಶಿಕ್ಷಣ | |

| | | | |
|---|---|---|---|
| | | ಒಟ್ಟು | 3497.0 |
| **10. ಪರೀಕ್ಷೆಗಳು:2203-00-108-0-00** | | | |
| 1. | 015 | ಡಿಪ್ಲೊಮಾ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪಕರಿಗೆ ಸಂಭಾವನೆ : ಸರ್ಕಾರಿ ಪಾಲಿಟೆಕ್ನಿಕ್/ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪರೀಕ್ಷಾ ಉದ್ದೇಶಕ್ಕಾಗಿ ಸಿಸಿಟಿವಿ, ಕಂಪ್ಯೂಟರ್ ಖರೀದಿಸಲು | 585.00 |
| | 041 | • ಡಿಪ್ಲೊಮಾ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪಕರಿಗೆ ಪ್ರಯಾಣ ಭತ್ಯೆ<br>• ಈ ಕೆಳಕಂಡ ಪರೀಕ್ಷಾ ಉದ್ದೇಶಗಳಿಗೆ ವಾಹನವನ್ನು ಬಾಡಿಗೆಗೆ ಪಡೆದು ಬಾಡಿಗೆ ಪಾವತಿಸಲು<br>ಪರೀಕ್ಷಾ ಪ್ರಶ್ನಾ ಪತ್ರಿಕೆಗಳ ವಿತರಣೆಗೆ ; ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪವನಕ್ಕಾಗಿ ನೋಡಲ್ ಸೆಂಟರ್‌ಗೆ ಕಳುಹಿಸುವುದು ಹಾಗೂ ಮೌಲ್ಯಮಾಪನದ ನಂತರ ವಾಪಸ್ ತರಲು ; ಪರೀಕ್ಷಾ ಲೇಖನಸಾಮಗ್ರಿಗಳ ಸಾಗಾಣಿಕೆಗೆ ; ಪರೀಕ್ಷೆ ಹಾಗೂ ಮೌಲ್ಯಮಾಪನಗಳ ಜಾಗ್ರತ ತಂಡದ ಪರಿವೀಕ್ಷಣೆ | 630.00 |
| | 051 | ಡಿಪ್ಲೊಮಾ ಪರೀಕ್ಷೆಗಳ ಪ್ರಶ್ನೆ ಮತ್ತು ಉತ್ತರ ಪತ್ರಿಕೆಗಳ ಮುದ್ರಣ; ಲೇಖನ ಸಾಮಗ್ರಿಗಳು ; ಪ್ರಶ್ನೆ ಪತ್ರಿಕೆ ಸಾರಿಗೆ ವೆಚ್ಚ, ಉತ್ತರ ಪತ್ರಿಕಗಳ ಸಾಗಾಣಿಕ ವೆಚ್ಚ, ಜೆರಾಕ್ಸ್ ಯಂತ್ರದ ಬಾಡಿಗೆ ವೆಚ್ಚ ಮತ್ತು ಕಛೇರಿ ವೆಚ್ಚಗಳಿಗಾಗಿ | 380.00 |
| | | ಒಟ್ಟು ಮೊತ್ತ | 1595.00 |
| **11.ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು:2203-00-112-0-02** | | | |
| 1. | ವೇತನ | ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಸಿಬ್ಬಂದಿಗಳಿಗೆ ವೇತನ ಪಾವತಿ | 4026.00 |
| | 015 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಸಿಬ್ಬಂದಿಗಳಿಗೆ ಪೂರಕ ವೆಚ್ಚಗಳು | 1.00 |
| | 021 | ವೈದ್ಯಕೀಯ ವೆಚ್ಚದ ಮರುಪಾವತಿ | 38.00 |
| | 041 | ಪ್ರಯಾಣ ವೆಚ್ಚ | 1.00 |
| | 051<br>052<br>071<br>195<br>221 | ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ಉಪನ್ಯಾಸಕರ ಭತ್ಯೆ, ಅಕುಶಲದಾಳುಗಳ ಭತ್ಯೆ, ಸೆಕ್ಯೂರಿಟಿ ಗಾರ್ಡ್‌ಗಳ ದೂರವಾಣಿ, ವಿದ್ಯುತ್ ಹಾಗೂ ನೀರಿನ ವೆಚ್ಚ, ಹಾಸ್ಟಲ್ ಹಾಗೂ ಇತರೆ ಕಟ್ಟಡಗಳ ಬಾಡಿಗೆ, ಯಂತ್ರೋಪಕರಣ-ಪೀಠೋಪಕರಣ-ಪುಸ್ತಕ ಮತ್ತಿತರೇ ಉಪರಕಣಗಳ ಖರೀದಿಗೆ, ಸಿಸಿಟಿವಿ | 6.00 |

| | | | |
|---|---|---|---|
| | | ಖರೀದಿ, ಬಯೋಮೆಟ್ರಿಕ್ ಹಾಜರಾತಿ ಪದ್ಧತಿ ಅನುಷ್ಠಾನ, ವಿದ್ಯಾರ್ಥಿಗಳಿಗೆ ಡೆಸ್ಕ್ ಖರೀದಿ, ಬೋಧಕ / ಬೋಧಕೇತರ ಸಿಬ್ಬಂದಿಗೆ ತರಬೇತಿ ಕಾರ್ಯಕ್ರಮ ಏರ್ಪಡಿಸಲು, ವಿದ್ಯಾರ್ಥಿಗಳ ಕೌಶ್ಯಾಭಿವೃದ್ಧಿ ತರಬೇತಿಗಾಗಿ, ವಿದ್ಯಾರ್ಥಿಗಳ ಲ್ಯಾಬ್ ತರಬೇತಿ ವೆಚ್ಚ ಹಾಗೂ ಈಗಾಗಲೇ ಖರೀದಿಸಲಾದ ಉಪಕರಣಗಳ ನಿರ್ವಹಣೆಗಾಗಿ ಹಾಗೂ ಹಿಂದಿನ ವರ್ಷದ ಬಾಕಿ ಪಾವತಿಸಲು | |
| | | ಒಟ್ಟು ಮೊತ್ತ | 4072.00 |
| 12.ಗಣಿ ಶಿಕ್ಷಣ ಶಾಲೆ, ಕೆ.ಜಿ.ಎಫ್:2203-00-112-0-05 | | | |
| 1. | ವೇತನ | ಗಣಿ ಶಿಕ್ಷಣ ಶಾಲೆ, ಕೆ.ಜಿ.ಎಫ್ ಸಂಸ್ಥೆಯ ಸಿಬ್ಬಂದಿ ವೇತನಕ್ಕೆ | 191.00 |
| | 015 | ಗಣಿ ಶಿಕ್ಷಣ ಶಾಲೆ, ಕೆ.ಜಿ.ಎಫ್ ಸಂಸ್ಥೆಯ ಸಿಬ್ಬಂದಿಗಳ ಪೂರಕ ವೆಚ್ಚ | 1.00 |
| | 021 | ವೈದ್ಯಕೀಯ ವೆಚ್ಚದ ಮರುಪಾವತಿ | 12.00 |
| | 041 | ಪ್ರಯಾಣ ವೆಚ್ಚ | 1.00 |
| | 051<br>071<br>117<br>180<br>195<br>221 | ಸದರಿ ಸಂಸ್ಥೆಯಲ್ಲಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ಉಪನ್ಯಾಸಕರ ಭತ್ಯೆ, ಅಕುಶಲದಾಳಗಳ ಭತ್ಯೆ, ಸೆಕ್ಯೂರಿಟಿಗಾರ್ಡ್‌ಗಳ ಭತ್ಯೆ, ಯಂತ್ರೋಪಕರಣ, ಪೀಠೋಪಕರಣ, ಪುಸ್ತಕ ಖರೀದಿಗಾಗಿ ವೆಚ್ಚಗಳನ್ನು ಭರಿಸಲು ; ಕಟ್ಟಡ ಬಾಡಿಗೆ, ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ; ಲ್ಯಾಬ್ ಉಪಕರಣ & ಸಾಮಗ್ರಿ ಮತ್ತು ಹಿಂದಿನ ವರ್ಷದ ಬಾಕಿ ಪಾವತಿಸಲು | 6.00 |
| | | ಒಟ್ಟು ಮೊತ್ತ | 211.00 |
| | | ಒಟ್ಟು ಮೊತ್ತ | 82.888.00 |

9/4

[ಅಪರ್ಣಾ ಪಾವಟೆ]
ಆಂತರಿಕ ಆರ್ಥಿಕ ಸಲಹೆಗಾರರು ಮತ್ತು
ಸರ್ಕಾರದಉಪಕಾರ್ಯದರ್ಶಿ (ಯೋಜನೆ)
ಉನ್ನತ ಶಿಕ್ಷಣ ಇಲಾಖೆ

9/4